ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಉದ್ಯಮ)
(ಹಿಂದಿನ ಕರ್ನಾಟಕ ಭೂಸೇನಾ ನಿಗಮ ನಿಯಮಿತ)
KARNATAKA RURAL INFRASTRUCTURE DEVELOPMENT LTD.,
(A Government of Karnataka Undertaking)
(Formerly Karnataka Land Army Corporation Limited)
ಸೇವೆ ನಿಷ್ಠ ದಕ್ಷತೆ

ಸಂ: ಕೆಆರ್‌ಐಡಿಎಲ್/ಗಣಕ/ಆರ್‌ಟಿಐ/2014-15 / 8549 ದಿನಾಂಕ: 04/03/2015

**ತುರ್ತು**

## ಸುತ್ತೋಲೆ

**ವಿಷಯ: ಮಾಹಿತಿ ಹಕ್ಕು ಅಧಿನಿಯಮ 2005ರ ಅಡಿ ಕಡತಗಳನ್ನು ವಿಷಯ ಸೂಚಿಯೊಂದಿಗೆ ಕಲಂ 4(1)(ಎ) ಮತ್ತು 4(1)ಬಿ ಅಡಿಯಲ್ಲಿ ಗಣಕೀಕರಣಗೊಳಸಿ ಕೆ.ಆರ್.ಐ.ಡಿ.ಎಲ್‌ನ ವೆಬ್‌ಸೈಟ್ www.kridl.gov.in ಪ್ರಕಟಿಸುವ ಬಗ್ಗೆ.**

******

ಮಾಹಿತಿ ಹಕ್ಕು ಅಧಿನಿಯಮ 2005ರ ಅಡಿ ಎಲ್ಲಾ ಕಚೇರಿಗಳ ಕಡತಗಳ ಈ ಕೆಳಗಿನ ವಿವರಗಳನ್ನು ಸಂಸ್ಥೆಯ ವೆಬ್‌ಸೈಟ್ **www.kridl.gov.in**ನಲ್ಲಿ ಪ್ರತಿ ವರ್ಷವೂ ಪ್ರಕಟಿಸಬೇಕಾಗಿರುತ್ತದೆ.

(a) **4(1)ಎ** ಪ್ರಕಾರ ಕಛೇರಿಯ ಕಡತಗಳ ವಿವರಗಳನ್ನು ವಿಷಯ ಸೂಚಿಯೊಂದಿಗೆ (Cataloguing, Indexing).(ಕಡತದ ಸಂಖ್ಯೆ, ವಿಷಯ, ಎಡಭಾಗದ ಪತ್ರಗಳ ಸಂಖ್ಯೆ, ಬಲಭಾಗದ ಪತ್ರಗಳ ಸಂಖ್ಯೆ, ಕಡತ ಪ್ರಾರಂಭಿಸಿದ ದಿನಾಂಕ, ಕಡತ ಮುಕ್ತಾಯಗೊಳಿಸಿದ ದಿನಾಂಕ, ಕಡತ ನಾಶಗೊಳಿಸಿದ ದಿನಾಂಕ, ಕಡತದ ವರ್ಗ ಇತ್ಯಾದಿ.)

(b) **4(1)ಬಿ** ಪ್ರಕಾರ 17 ಅಂಶಗಳ ಸಂಭಂದ ಪಟ್ಟ ಕಛೇರಿ ವಿವರ.

ಸದರಿ ವಿವರಗಳನ್ನು ಅಳವಡಿಸಲು ಸಂಸ್ಥೆಯು ಆರ್‌ಟಿಐ ಸಾಫ್ಟ್‌ವೇರ್ ಅನ್ನು ತಯಾರಿಸಿದ್ದು, ಸಂಬಂಧಿಸಿದ ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಯವರು ಹಾಗೂ ಪ್ರಾಜೆಟ್‌ನ ಎಲ್ಲಾ ಅಧೀಕ್ಷಕ ಅಭಿಯಂತರರು, ಕಾರ್ಯಪಾಲಕ ಅಭಿಯಂತರರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು, ಆದ್ಯತೆ ಮೇರೆಗೆ ಕೆ.ಆರ್.ಐ.ಡಿ.ಎಲ್‌ನ ಆರ್‌ಟಿಐ ಸಾಫ್ಟ್‌ವೇರ್‌ನಲ್ಲಿ ತಕ್ಷಣ ಅಳವಡಿಸಲು ಸೂಚಿಸಲಾಗಿದೆ.

1. ಆರ್‌ಟಿಐ ಸಾಫ್ಟ್‌ವೇರ್ ಸಂಸ್ಥೆಯ ವೆಬ್‌ಸೈಟ್ **www.kridl.gov.in** ನ internal login ಲಿಂಕ್‌ನಲ್ಲಿ ಲಭ್ಯವಿದೆ.
2. ಎಲ್ಲಾ ಮಾಹಿತಿಯನ್ನು ಕನ್ನಡದಲ್ಲಿ ನಮೂದಿಸಬೇಕು.
3. ಆರ್‌ಟಿಐ ಸಾಫ್ಟ್‌ವೇರ್‌ನ username/passwordಗಳು ಭೂಸಿರಿಯ username/password ಗಳೇ ಆಗಿರುತ್ತದೆ. passwordಗಳನ್ನ ಗೌಪ್ಯವಾಗಿ ಇಡಲು ಸೂಚಿಸಲಾಗಿದೆ.
4. ಎಲ್ಲಾ ಮಾಹಿತಿಗಳು ದಿನಾಂಕ 31.03.2015ರ ವರೆಗೆ ಪರಿಪೂರ್ಣಗೊಳಿಸಿದ (updated) ಮಾಹಿತಿಯಾಗಿರಬೇಕು. ಎಲ್ಲಾ ಮಾಹಿತಿಗಳು ದಿನಾಂಕ 01.04.2015 ರ ಒಳಗಡೆ ನಮೂದಿಸಬೇಕು.
5. ಆರ್‌ಟಿಐ ಸಾಫ್ಟ್‌ವೇರ್‌ನನ್ನು ಉಪಯೋಗಿಸುವ ಬಗ್ಗೆ ಸಂಸ್ಥೆಯ ವೆಬ್‌ಸೈಟ್ **www.kridl.gov.in** ನ download ಲಿಂಕ್ ನಲ್ಲಿ ಮಾಹಿತಿ ಲಭ್ಯವಿದೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಕೇಂದ್ರ ಕಚೇರಿಯ ಕಂಪ್ಯೂಟರ್ ಶಾಖೆಯನ್ನು ಸಂಪರ್ಕಿಸುವುದು.
6. ನಮೂದಿಸಿದ ಮಾಹಿತಿಗಳು ನಿಮ್ಮ login ನಲ್ಲಿ ಲಭ್ಯವಿರುತ್ತದೆ ಹಾಗೂ ಸಾರ್ವಜನಿಕರಿಗೆ ಸಂಸ್ಥೆಯ ವೆಬ್‌ಸೈಟ್ **www.kridl.gov.in** ನ ಆರ್‌ಟಿಐ ಲಿಂಕ್‌ನಲ್ಲಿ ಲಭ್ಯವಿರುತ್ತದೆ. ಹಾಗೂ ಸಾರ್ವಜನಿಕರಿಗೆ ಕಾಣಿಸುವ ವಿವರಗಳನ್ನು ಸಂಬಂದ ಪಟ್ಟ ಅಧಿಕಾರಿ/ ಸಿಬ್ಬಂದಿ ಪರಿಶೀಲಿಸಬೇಕು.

. . . .2

ಸದರಿ ವಿಷಯವು ಅತ್ಯಂತ ಗಂಭೀರವಾಗಿದ್ದು ತಕ್ಷಣ ಎಲ್ಲಾ ಸಂಭಂದ ಪಟ್ಟ ಕೇಂದ್ರ ಕಚೇರಿಯ ಎಲ್ಲಾ ಅಧಿಕಾರಿಗಳು/ ಸಿಬ್ಬಂದಿಯವರು ಹಾಗೂ ಪ್ರಾಜೆಕ್ಟ್‌ನ ಎಲ್ಲಾ ಅಧೀಕ್ಷಕ ಅಭಿಯಂತರರು, ಕಾರ್ಯಪಾಲಕ ಅಭಿಯಂತರರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು, 4(1)(a) ಹಾಗೂ 4(1)(b) ನನ್ನು ಆರ್‌ಟಿಐ ಸಾಫ್ಟ್‌ವೇರ್‌ನಲ್ಲಿ ತಕ್ಷಣ ನಮೂದಿಸಿ ದಿನಾಂಕ 01.04.2015ರ ಒಳಗೆ ಪೂರ್ಣಗೊಳಿಸಬೇಕು. ತಪ್ಪಿದಲ್ಲಿ ಸಂಭಂಧಿಸಿದ ಅಧಿಕಾರಿಗಳು/ಸಿಬ್ಬಂದಿಯನ್ನೇ ನೇರ ಹೊಣೆಗಾರರಾಗಿ ಮಾಡಲಾಗುವುದು.

**ವ್ಯವಸ್ಥಾಪಕ ನಿರ್ದೇಶಕರು**

**<u>ಇವರಿಗೆ ಸೂಕ್ತ ಕ್ರಮಕ್ಕಾಗಿ,</u>**

1. ಎಲ್ಲಾ ಅಧೀಕ್ಷಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್.
2. ಎಲ್ಲಾ ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್.
3. ಎಲ್ಲಾ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್.
4. ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳಿಗೆ ಹಾಗೂ ಎಲ್ಲಾ ಸಿಬ್ಬಂದಿಯವರಿಗೆ.

18/3/15
DESPATCHED